**ಕರ್ನಾಟಕ ಸರ್ಕಾರ**
**ಆಯುಕ್ತರ ಕಾರ್ಯಾಲಯ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, 4ನೇ ಮಹಡಿ, ಮಿಂಟೋ ಶ್ರೀ ಆಂಜನೇಯ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು -18, ದೂರವಾಣಿ:26709689/ 26706775, Email: endowmentcommissioner@gmail.com.**

ಸಂಖ್ಯೆ: HRICE-ADM0ADM8/51/2026/E-2047124 ದಿನಾಂಕ:-22.06.2026.

## -: ಪ್ರಕಟಣೆ :-

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಅಧಿನಿಯಮ, 2011ರ ಕಲಂ 25 ಅನ್ವಯ ರಚಿಸಲಾಗಿದ್ದ ಈ ಕೆಳಕಂಡ 01 "ಎ" ಪ್ರವರ್ಗದ ದೇವಾಲಯದ ವ್ಯವಸ್ಥಾಪನಾ ಸಮಿತಿಯ ಅವಧಿಯು ಸದರಿ ದೇವಾಲಯದ ಹೆಸರಿನ ಮುಂದೆ ನಮೂದಿಸಿರುವ ದಿನಾಂಕದಂದು ಮುಕ್ತಾಯವಾಗಿರುವುದರಿಂದ ಸದರಿ ದೇವಾಲಯಕ್ಕೆ ಹೊಸದಾಗಿ ವ್ಯವಸ್ಥಾಪನಾ ಸಮಿತಿಯನ್ನು ರಚಿಸುವ ಸಲುವಾಗಿ ಸಾರ್ವಜನಿಕ / ಭಕ್ತಾದಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ, ಪ್ರಕಟಣೆ ಹೊರಡಿಸಲು ದಿನಾಂಕ:17.03.2025ರಂದು ನಡೆದ 4ನೇ ರಾಜ್ಯ ಧಾರ್ಮಿಕ ಪರಿಷತ್ತಿನ 8ನೇ ಸಭೆಯ ವಿಷಯ ಸೂಚಿ ಸಂಖ್ಯೆ:(3)ರಲ್ಲಿ ತೀರ್ಮಾನಿಸಲಾಗಿರುತ್ತದೆ.

| ಕ್ರ. ಸಂ | ದೇವಾಲಯದ ಹೆಸರು ಮತ್ತು ವಿಳಾಸ | ಮೂರು ವರ್ಷಗಳ ವ್ಯವಸ್ಥಾಪನಾ ಸಮಿತಿಯ ಅವಧಿಯು ಮುಕ್ತಾಯವಾದ ದಿನಾಂಕ |
|---|---|---|
| 1. | ಕೋಲಾರ ಜಿಲ್ಲೆ, ಬಂಗಾರಪೇಟೆ, ಗುಟ್ಟಹಳ್ಳಿ ಗ್ರಾಮ, ಬಂಗಾರುತಿರುಪತಿ, ಶ್ರೀ ವೆಂಕಟರಮಣ ಸ್ವಾಮಿ ದೇವಾಲಯ. | 17.12.2025 |

ಈ ಕೆಳಕಂಡ 01 ಸಂಯುಕ್ತ ಸಂಸ್ಥೆಯ ವ್ಯವಸ್ಥಾಪನಾ ಸಮಿತಿಯ ಅವಧಿಯು ಸಹ ಸದರಿ ಸಂಸ್ಥೆಯ ಹೆಸರಿನ ಮುಂದೆ ನಮೂದಿಸಿರುವ ದಿನಾಂಕದಂದು ಮುಕ್ತಾಯವಾಗಿರುವುದರಿಂದ ಸದರಿ ಸಂಸ್ಥೆಗೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಅಧಿನಿಯಮ, 2011ರ ಕಲಂ 25(1)ರಡಿಯಲ್ಲಿ ಹಿಂದೂ ಮತ್ತು ಮುಸ್ಲಿಂ ಈ ಎರಡೂ ಧರ್ಮದ ಭಕ್ತಾಧಿಗಳು ಮತ್ತು ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಿ, ಪ್ರಕಟಣೆ ಹೊರಡಿಸಲು ದಿನಾಂಕ:17.03.2026ರಂದು ನಡೆದ 4ನೇ ರಾಜ್ಯ ಧಾರ್ಮಿಕ ಪರಿಷತ್ತಿನ11ನೇ ಸಭೆಯ ವಿಷಯ ಸೂಚಿ ಸಂಖ್ಯೆ:(8)ರಲ್ಲಿ ತೀರ್ಮಾನಿಸಲಾಗಿರುತ್ತದೆ.

| ಕ್ರ. ಸಂ | ದೇವಾಲಯದ ಹೆಸರು ಮತ್ತು ವಿಳಾಸ | ಮೂರು ವರ್ಷಗಳ ವ್ಯವಸ್ಥಾಪನಾ ಸಮಿತಿಯ ಅವಧಿಯು ಮುಕ್ತಾಯವಾದ ದಿನಾಂಕ |
|---|---|---|
| 2. | ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ತಾಲ್ಲೂಕು, ಐ.ಡಿ ಪೀಠ, ಶ್ರೀ ಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾ. | 17.12.2025 |

ಹಾಗೂ ಈ ಕೆಳಕಂಡ 13 ಸಂಸ್ಥೆಗಳಿಗೆ ವ್ಯವಸ್ಥಾಪನಾ ಸಮಿತಿ ರಚಿಸುವ ಸಂಬಂಧ ಅರ್ಜಿ ಆಹ್ವಾನಿಸಿ ಹೊರಡಿಸಿದ ಪ್ರಕಟಣೆಗೆ ನಿಗದಿತ ಅವಧಿಯಲ್ಲಿ ಯಾವುದೇ ಅರ್ಜಿಗಳು ಸ್ವೀಕೃತವಾದ

ಕಾರಣ ಎರಡನೇ ಬಾರಿ ಮರು ಪ್ರಕಟಣೆ ಹೊರಡಿಸಿ ಅರ್ಜಿ ಆಹ್ವಾನಿಸಲು ಮತ್ತು ಪ್ರಕಟಣೆಯನ್ನು ಪ್ರಮುಖ ದಿನಪತ್ರಿಕೆಗಳಲ್ಲಿ ಪ್ರಚುರ ಪಡಿಸುವಂತೆ ದಿನಾಂಕ:17.03.2026 ರಂದು ನಡೆದ ರಾಜ್ಯ ಧಾರ್ಮಿಕ ಪರಿಷತ್ತಿನ ಸಭೆಯ ವಿಷಯ ಸೂಚಿ ಸಂಖ್ಯೆ:(8)ರಲ್ಲಿ ತೀರ್ಮಾನಿಸಲಾಗಿರುತ್ತದೆ.

| ಕ್ರ.ಸಂ. | ದೇವಾಲಯಗಳ ಹೆಸರು ಮತ್ತು ವಿವರ |
|---|---|
| 3. | ಬೆಂಗಳೂರು ನಗರ ಜಿಲ್ಲೆ, ನಗರ್ತರಪೇಟೆ, ಶ್ರೀ ವೆಂಕಟರಣಸ್ವಾಮಿ ದೇವಾಲಯ. |
| 4. | ತುಮಕೂರು ಜಿಲ್ಲೆ, ಮಧುಗಿರಿ ತಾಲ್ಲೂಕು, ದೊಡ್ಡದಾಳವಟ್ಟ ಗ್ರಾಮದ ಶ್ರೀ ಲಕ್ಷ್ಮೀ ರಂಗನಾಥ ಸ್ವಾಮಿ ದೇವಾಲಯ. |
| 5. | ಬಳ್ಳಾರಿ ಜಿಲ್ಲೆ, ಬಳ್ಳಾರಿ ತಾಲ್ಲೂಕು, ಎತ್ತಿನಬೂದಿಹಾಳ್, ಶ್ರೀ ಕಟ್ಟೆಬಸವೇಶ್ವರ ಸ್ವಾಮಿ ದೇವಾಲಯ. |
| 6. | ಹಾಸನ ಜಿಲ್ಲೆ, ಅರಸೀಕೆರೆ ತಾಲ್ಲೂಕು, ಮಾಲೇಕಲ್, ತಿರುಪತಿ, ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯ. |
| 7. | ತುಮಕೂರು ಜಿಲ್ಲೆ, ಮಧುಗಿರಿ ಟೌನ್, ಶ್ರೀ ದಂಡಿನ ಮಾರಮ್ಮ ದೇವಾಲಯ. |
| 8. | ತುಮಕೂರು ಜಿಲ್ಲೆ, ತಿಪಟೂರು ತಾಲ್ಲೂಕು, ರಜತಾದ್ರಿಪುರ, ಶ್ರೀ ಲಕ್ಷ್ಮೀ ನರಸಿಂಹ ಸ್ವಾಮಿ ದೇವಾಲ. |
| 9. | ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕು, ಪಾಂಡೇಶ್ವರ, ಶ್ರೀ ಮಹಾ ಲಿಂಗೇಶ್ವರ ಸ್ವಾಮಿ ದೇವಾಲಯ. |
| 10 | ಮಂಡ್ಯ ಜಿಲ್ಲೆ, ಮಂಡ್ಯ ತಾಲ್ಲೂಕು, ಡಿಂಕಾ, ಶ್ರೀ ಡಿಂಕದಮ್ಮ ದೇವಾಲಯ. |
| 11 | ಮಂಡ್ಯ ಜಿಲ್ಲೆ, ಕೆ.ಅರ್ ಪೇಟೆ ತಾಲ್ಲೂಕು, ಸಾಸಲು ಗ್ರಾಮ, ಶ್ರೀ ಸೋಮೇಶ್ವರ ಮತ್ತು ಶಂಭುಲಿಂಗೇಶ್ವರ ಸ್ವಾಮಿ ದೇವಾಲಯ. |
| 12 | ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು, ಕಲ್ಲುವೀರನಹಳ್ಳಿ ಗ್ರಾಮ, ಶ್ರೀ ಮತ್ತಿ ತಾಳೇಶ್ವರ ಸ್ವಾಮಿ ದೇವಾಲಯ, |
| 13 | ಶ್ರೀ ಗವಿರಂಗನಾಥಸ್ವಾಮಿ ದೇವಾಲಯ, ಬಿಲ್ಲೇನಹಳ್ಳಿ, ಕೆ.ಆರ್ ಪೇಟೆ ತಾಲ್ಲೂಕು, ಮಂಡ್ಯ ಜಿಲ್ಲೆ. |
| 14 | ವಿಜಯನಗರ ಜಿಲ್ಲೆ, ಮರಿಯಮ್ಮನಹಳ್ಳಿ, ಶ್ರೀಲಕ್ಷ್ಮೀ ನಾರಾಯಣ ದೇವಾಲಯ. |
| 15 | ಬಳ್ಳಾರಿ ಜಿಲ್ಲೆ, ಬಳ್ಳಾರಿ ತಾಲ್ಲೂಕು, ಶ್ರೀ ಕೋಟೆ ಮಲ್ಲೇಶ್ವರ ಸ್ವಾಮಿ ದೇವಾಲಯ, |

ರಾಜ್ಯ ಧಾರ್ಮಿಕ ಪರಿಷತ್ತಿನ ಸಭೆಗಳ ನಿರ್ಣಯಗಳಂತೆ ಹಾಗೂ ರಾಜ್ಯ ಧಾರ್ಮಿಕ ಪರಿಷತ್ತಿನ ಅಧ್ಯಕ್ಷರಿಂದ ಅನುಮೋದನೆಗೊಂಡಿರುವಂತೆ ಈ ಮೇಲ್ಕಂಡ ಒಟ್ಟು 15 "ಎ" ಪ್ರವರ್ಗದ ದೇವಾಲಯಗಳಿಗೆ ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ (ತಿದ್ದುಪಡಿ) ಅಧಿನಿಯಮ 2011ರ ಸೆಕ್ಷನ್ 25 ರನ್ವಯ 25ರಂತೆ ಪ್ರಸ್ತಾಪಿತ ದೇವಾಲಯಗಳಿಗೆ 09 ಮಂದಿ ಮಹನೀಯರು / ಮಹಿಳೆಯರನ್ನೊಳಗೊಂಡ ವ್ಯವಸ್ಥಾಪನಾ ಸಮಿತಿಯನ್ನು ರಚಿಸುವ ಸಂಬಂಧ ಸಮಿತಿಗೆ ಸದಸ್ಯತ್ವ ಬಯಸುವ ಆಸಕ್ತ ಭಕ್ತಾಧಿಗಳು /ಸಾರ್ವಜನಿಕರಿಂದ ಅರ್ಜಿ ಆಹ್ವಾನಿಸಿ, ಪ್ರಕಟಣೆ ಹೊರಡಿಸಿದೆ.

ಸದರಿ ದೇವಾಲಯಗಳ ವ್ಯವಸ್ಥಾಪನಾ ಸಮಿತಿಗೆ ಕನಿಷ್ಟ 25 ವರ್ಷಕ್ಕಿಂತ ಮೇಲ್ಪಟ್ಟ ಆಸ್ತಿಕ ಭಕ್ತಾಧಿಗಳು ಸದಸ್ಯತ್ವ ಕೋರಿ, ಅರ್ಜಿಯನ್ನು ನಿಗಧಿತ ನಮೂನೆ-1(ಬಿ)(22ನೇ ನಿಯಮ)

ನಮೂನೆಯಲ್ಲಿ ಭರ್ತಿ ಮಾಡಿ, ಅರ್ಜಿಯನ್ನು ದಿನಾಂಕ:13.07.2026ರೊಳಗಾಗಿ "**ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ, ಮಿಂಟೋ ಶ್ರೀ ಆಂಜನೇಯ ಭವನ, ಆಲೂರು ವೆಂಕಟರಾವ್ ರಸ್ತೆ, ಚಾಮರಾಜಪೇಟೆ, ಬೆಂಗಳೂರು-560018"** ಇಲ್ಲಿಗೆ ನೇರವಾಗಿ ಸಲ್ಲಿಸತಕ್ಕದ್ದು, ಅಂತಹ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು, ನಿಗಧಿತ ಅವಧಿಯ ನಂತರದಲ್ಲಿ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. (ನಿಗಧಿತ ಅರ್ಜಿ ನಮೂನೆಯು ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಮತ್ತು www.itms.kar.gov.in ನಲ್ಲಿ ಲಭ್ಯವಿರುತ್ತದೆ.)

**(ಕ.ಟಿ.ಆ.ಮೇ)**

ಸದಸ್ಯ ಕಾರ್ಯದರ್ಶಿ,
ರಾಜ್ಯ ಧಾರ್ಮಿಕ ಪರಿಷತ್ತು
ಹಾಗೂ ಆಯುಕ್ತರು, ಧಾರ್ಮಿಕ ದತ್ತಿಗಳ ಇಲಾಖೆ,
ಬೆಂಗಳೂರು ರವರ ಪರವಾಗಿ

**ಪ್ರತಿಯನ್ನು:**

1. ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ/ ಬಳ್ಳಾರಿ ಜಿಲ್ಲೆ/ ಹಾಸನ ಜಿಲ್ಲೆ/ ತುಮಕೂರು ಜಿಲ್ಲೆ/ ದಕ್ಷಿಣ ಕನ್ನಡ ಜಿಲ್ಲೆ/ ಮಂಡ್ಯ ಜಿಲ್ಲೆ/ ಕೋಲಾರ/ಚಿಕ್ಕಮಗಳೂರು/ವಿಜಯನಗರ ಜಿಲ್ಲೆ.
2. ಸಹಾಯಕ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ, ಬೆಂಗಳೂರು ನಗರ ಜಿಲ್ಲೆ / ಬಳ್ಳಾರಿ ಜಿಲ್ಲೆ/ ದಕ್ಷಿಣ ಕನ್ನಡ ಜಿಲ್ಲೆ.
3. ಸಂಬಂಧಪಟ್ಟ ದೇವಾಲಯಗಳ ಕಾರ್ಯನಿರ್ವಾಹಕ ಅಧಿಕಾರಿಗಳು.
4. ಸ್ಥಾಯಿಕಡತ.
5. ಹೆಚ್ಚುವರಿ.